ಬೆಳೆಸಲಾಗಿದೆ. ಈ ಬೆಳೆಗಾಗಿ ಬೇಕಾದ ತಾಳೆ ಸಸಿ ಮತ್ತು 4 ವರ್ಷಗಳವರೆಗೆ ಅವುಗಳನ್ನು ಕಾಪಾಡಲು ಬೇಕಾದ ಗೊಬ್ಬರ ಸಸ್ಯ ಸಂರಕ್ಷಣಾ ಔಷಧಿ ಇವುಗಳನ್ನು ಪುಕ್ಕಟೆಯಾಗಿ ಕೊಡಲಾಗಿದೆ.

2. ಭಾರತ ಸರ್ಕಾರದ ಕೃಷಿ ಸಚಿವಾಲಯದ ಆರ್ಥಿಕ ನೆರವಿನೊಡನೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:–

1. ತಾಳೆ ಬೀಜೋತ್ಪಾದನಾ ಕೇಂದ್ರ:– ತಾಳೆ ಸಸಿಗಳನ್ನು ಬೆಳೆಸಲು ಬೇಕಾದ ಬೀಜಗಳನ್ನು ಈಗ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ, ಮುಂಬರುವ ವರ್ಷಗಳಲ್ಲಿ ರಾಜ್ಯಕ್ಕೆ ಬೇಕಾದ ತಾಳೆ ಬೀಜಗಳನ್ನು ಉತ್ಪಾದಿಸಲು, ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾ. ತಾರಕ ಜಲಾಶಯದಿಂದ ಕೆಳಗಡೆ 50.00 ಎಕರೆ ತಾಳೆ ಬೀಜೋತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

2. ತಾಳೆ ಬೆಳೆಯ ಫ್ರಂಟ್ ಲೈನ್ ಪ್ರಾತ್ಯಕ್ಷತಾ ಯೋಜನೆ:–

ತಾಳೆ ಬೆಳೆಯು ರಾಜ್ಯಕ್ಕೆ ಹೊಸ ಬೆಳೆಯಾಗಿದ್ದು, ಈ ಬೆಳೆಯನ್ನು ಬೆಳೆಸಲು ಅನುಸರಿಸಬೇಕಾದ ಕ್ರಮಗಳು ನೀರಾವರಿ ವ್ಯವಸ್ಥೆ, ರೋಗ ಮತ್ತು ಕೀಟಗಳ ನಿಯಂತ್ರಣ ಕೊಯಿಲು ಮತ್ತು ಸಂಸ್ಕರಣೆ ಇವುಗಳ ಬಗ್ಗೆ ಮಾಹಿತಿ ಪಡೆದು ರೈತರಿಗೆ ತಿಳುವಳಿಕೆ ನೀಡಲು ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾ. ಭೀಮನಕೊಲ್ಲಿ ತೋಟಗಾರಿಕಾ ಕ್ಷೇತ್ರದಲ್ಲಿ 200 ಎಕರೆಯಲ್ಲಿ ತಾಳೆ ಬೆಳೆ ಬೆಳೆಸಲಾಗುತ್ತಿದೆ. ಇದಲ್ಲದೆ 1.0 ಟನ್ ಸಾಮರ್ಥ್ಯದ ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಗುತ್ತಿದೆ.

3. ತಾಳೆ ಬೆಳೆ ಅಭಿವೃದ್ಧಿ ಯೋಜನೆಯನ್ವಯ ತಾಳೆ ಸಸ್ಯಾಗಾರಗಳನ್ನು ಪ್ರಾರಂಭ ಮಾಡುವುದು:–

ಮುಂಬರುವ ವರ್ಷಗಳಲ್ಲಿ ತಾಳೆಬೆಳೆ ವಿಸ್ತೀರ್ಣ ಕೈಗೊಳ್ಳಲು ಭದ್ರಾ ಅಚ್ಚುಕಟ್ಟು ಕಾವೇರಿ ಕಣಿವೆ ಮತ್ತು ತುಂಗಭದ್ರಾ ಅಚ್ಚುಕಟ್ಟು ಪ್ರದೇಶಗಳಲ್ಲಿ ತಾಳೆ ಸಸ್ಯಾಗಾರಗಳನ್ನು ಪ್ರಾರಂಭ ಮಾಡಲಾಗಿದೆ. ತಾಳೆ ಬೀಜಗಳನ್ನು ಆಮದು ಮಾಡಿಕೊಂಡು ನಾಟಿ ಮಾಡಲಾಗಿದೆ.

ಅ. ಈಗಾಗಲೇ ಅಭಿವೃದ್ಧಿ ಪಡಿಸಿರುವ 1114 ಹೆಕ್ಟೇರ್ ಪ್ರದೇಶದಲ್ಲಿನ 850 ಹೆ. ಪ್ರದೇಶದಲ್ಲಿ ಜುಲೈ 93ರ ನಂತರ ಕಾಯಿಗಳು ಕೊಯ್ಲಿಗೆ ಬರುತ್ತದೆ.

ಇ. ಈಗಾಗಲೇ ಬೆಳೆಸಿರುವ ಗಿಡಗಳಿಂದ ಬರುವ ತಾಳೆ ಕಾಯಿಗಳನ್ನು ಸಂಸ್ಕರಿಸಿ ತಾಳೆ ಎಣ್ಣೆ ಪಡೆಯಲು ಜಂಟಿ ಸ್ವಾಮ್ಯದಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಲಾಗುತ್ತಿದೆ.

ರೈತರಿಗೆ ತೆಂಗಿನ ಸಸಿಗಳ ಅಭಾವ.

1078 (678): ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ರೈತರಿಗೆ ಅವಶ್ಯಕವಿರುವ ತೆಂಗಿನ ಸಸಿಗಳ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಅವಶ್ಯಕವಿರುವಷ್ಟು ಸಸಿಗಳನ್ನು ಒದಗಿಸಲು ತೋಟಗಾರಿಕೆ ಇಲಾಖೆಗೆ ಇರುವ ತೊಂದರೆಯೇನು;

ಇ. ಮುಂದಿನ ವರ್ಷದಿಂದಲಾದರೂ ತೋಟಗಾರಿಕೆ ಇಲಾಖೆಯವರು ರೈತರಿಗೆ ಸಾಕಷ್ಟು ತೆಂಗಿನ ಸಸಿಗಳನ್ನು ಒದಗಿಸಲು ವ್ಯವಸ್ಥೆ ಮಾಡುವರೇ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. ಬಂದಿದೆ.

ಆ. ಸಂಪನ್ಮೂಲಗಳ ಕೊರತೆ

ಇ. ತೋಟಗಾರಿಕೆ ಇಲಾಖೆಯು ರೈತರ ಬೇಡಿಕೆಗಳನ್ನು ಈಡೇರಿಸಲು ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ.

ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿ ಸದಸ್ಯರ ಸಂಖ್ಯೆ.

1079 (1759): ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾಪರಿಷತ್‌ಗೆ ಆರಿಸಿ ಬಂದಿರುವ ಜಿಲ್ಲಾಪರಿಷತ್ ಸದಸ್ಯರುಗಳ ಮಂಡಲ ಪಂಚಾಯ್ತಿ ಸದಸ್ಯರುಗಳ ಹಾಗೂ ಮಂಡಲ ಪಂಚಾಯ್ತಿ ಅಧ್ಯಕ್ಷರುಗಳ ಸಂಖ್ಯೆ ಎಷ್ಟು;

ಆ. ಹೀಗೆ ಆರಿಸಿ ಬಂದವರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ಜಿಲ್ಲಾಪರಿಷತ್ ಸದಸ್ಯರ ಸಂಖ್ಯೆ 887
ಮಂಡಲ್ ಪಂಚಾಯತ್ ಸದಸ್ಯರ ಸಂಖ್ಯೆ – 56372
ಮಂಡಲ್ ಪಂಚಾಯತ್ ಅಧ್ಯಕ್ಷರ ಸಂಖ್ಯೆ 2534

ಆ. ಜಿಲ್ಲಾಪರಿಷತ್ ಮಂಡಲಪಂಚಾಯತ್

ಪರಿಶಿಷ್ಟ ಜಾತಿ		
ಪರಿಶಿಷ್ಟ ವರ್ಗ	194	11968

ಹಿಂದುಳಿದ ವರ್ಗ: ಕರ್ನಾಟಕ ಜಿಲ್ಲಾಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಕಾಯ್ದೆ 1983ರಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಇರುವುದಿಲ್ಲ.

ದಾವಣಗೆರೆಯಲ್ಲಿ ತಹಶೀಲ್ದಾರ್, ಸಬ್‌ರಿಜಿಸ್ಟ್ರಾರ್ ಆಫೀಸಿಗೆ ನೂತನ ಕಟ್ಟಡ.

1081 (1691): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆಯ ಹಳೆಯ ಭಾಗದಲ್ಲಿ ಈಗ ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್‌ರವರ ಕಚೇರಿಗಳು ಹಳೆಯ ಕಟ್ಟಡದಲ್ಲಿದ್ದು ನಗರದ ಮಧ್ಯ ಭಾಗದಲ್ಲಿದ್ದು, ಅವು ಸುಮಾರು 100 ವರ್ಷ ಹಳೆಯದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಆ ಕಚೇರಿಗಳನ್ನು ನೂತನವಾಗಿ ಕಟ್ಟಿಸುವ ಯೋಜನೆ ಸರ್ಕಾರಕ್ಕೆ ಇದೆಯೇ;